ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ.**2187/2014**

ಚಾಸಾಃ 17
ಫ್ರಾಸಾಃ 16

ದಿನಾಂಕಃ **12-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | - | ರಂಗಸ್ವಾಮಿ |
| ತಂದೆಯ/ಗಂಡನ ಹೆಸರು | - | ಲೇಟ್ ಹುಚ್ಚಪ್ಪ |
| ವಯಸ್ಸು | - | 64 ವರ್ಷ |
| ಉದ್ಯೋಗ | - | ನಿವೃತ್ತ ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | - | ಟಿ. ಬೇಗೂರು, ನೆನಮಂಗಲ ತಾಃ |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ದಿಃ **30-09-2013** ರಿಂದ ದಿಃ **05-09-2015** ರವರೆಗೆ ನಾನು ನೊಣವಿನಲೆರೆ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **15-08-2014** ರಂದು ಮಧ್ಯಾಹ್ನ **1-45** ಗಂಟೆಗೆ ಈ ಪ್ರಕರಣದ ಚಾಸಾ-**1** ಠಾಣೆಗೆ ಹಾಜರಾಗಿ ನೀಡಿರುವ ಲಿಖಿತ ದೂರಿನ ಮೇರೆಗೆ ಠಾಣಾ ಗುನ್ನೆ ನಂ. **89/2014** ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-**1** ದಾಖಲಾತಿ ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-**1** ರ ದಾಖಲಾತಿಯಲ್ಲಿರುವ ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಗಿದೆ. ಈ ಹಂತದಲ್ಲಿ ಸಾಕ್ಷಿಗೆ ಟಿ ಎಲ್ ಎಸ್ ಎ ಕಡೆಯಿಂದ ಹೋದಂತಹ ಒಂದು ದಾಖಲಾತಿ ತೋರಿಸಿದ್ದು ಅದನ್ನು ನಿಪಿ-**10** ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-**10**(ಎ) ಎಂದು ಗುರುತಿಸಲಾಗಿದೆ. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲಾತಿ ತೋರಿಸಿದ್ದು ಅದು ಪ್ರ.ವ.ವರದಿಯಾಗಿರುತ್ತದೆ ಅದನ್ನು ನಿಪಿ-**11** ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**11**(ಎ) ಎಂದು ಗುರುತಿಸಲಾಗಿದೆ. ಈ ಪ್ರಕರಣವು ಘೋರ ಅಪರಾಧವಾಗಿದ್ದರಿಂದ ಚಾಸಾ-**18** ರವರಿಗೆ ವರ್ಗಾವಣೆ ಮಾಡಿರುತ್ತೇನೆ.

ಪಾಟೀ ಸವಾಲು- ಶ್ರೀ ಸಿ.ವಿ ವಕೀಲರಿಂದಃ

ನಾನು ದೂರಿನಲ್ಲಿರುವ ಸಾರಾಂಶವನ್ನು ಚಾಸಾ-1 ರವರಿಗೆ ತಿಳಿಸಿರುವುದಿಲ್ಲ ಏಕೆಂದರೆ ದೂರನ್ನು ವಿವರವನ್ನು ನೀಡಿದ್ದ ಕಾರಣದಿಂದ ಸಾರಾಂಶವನ್ನು ತಿಳಿಸಿರುವುದಿಲ್ಲ. ಯಾವುದಾದರೂ ಲಿಖಿತ ದೂರು ಬಂದಂತಹ ಸಮಯದಲ್ಲಿ ಅದನ್ನು ನಾವು ವಿವರಿಸಬೇಕು ಎಂದರೆ ಸರಿ. ನಿಪಿ-11 ರಲ್ಲಿ ಕಾಲಂ. 12 ರಲ್ಲಿ ಪಿರ್ಯಾದಿಯ ಸಹಿಯನ್ನು ಯಾವ ಸಮಯದಲ್ಲಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಪ್ರ.ವ.ವರದಿಯ ಸಮಯದಲ್ಲಿ ಎಂದು ಹೇಳುತ್ತಾರೆ. ಚಾಸಾ-1 ರವರು ಠಾಣೆಗೆ ಬಂದು ದೂರನ್ನು ನೀಡಿರುವ ಉದ್ದೇಶದಿಂದ ಮೇರೆಗೆ ಸಹಿಯನ್ನು ಪಡೆದುಕೊಡಿಂರುತ್ತೇನೆ. ಚಾಸಾ-1 ರವರು ಒಬ್ಬರೇ ಬಂದು ದೂರನ್ನು ನೀಡಿರುತ್ತಾರೆ. ಸದರಿ ನಿಪಿ-1 ರ ದಿನಾಂಕವು ದಿಃ 03-08-2014 ಆಗಿರುತ್ತದೆ. ನಿಪಿ-1 ರಂತೆ ದೂರನ್ನು ಚಾಸಾ-1 ರವರು ಬರೆದುಕೊಂಡು ಠಾಣೆಗೆ ಬಂದಿರುತ್ತಾರೆ. ಚಾಸಾ-1 ರವರ ಜೊತೆ ನಾನು ಸೇರಿಕೊಂಡು ಅವರಿಗೆ ಸಹಾಯ ಆಗುವ ಕಾರಣ ನಿಪಿ-1 ರಂತೆ ದಾಖಲಾತಿಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ ಹಾಗೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.